# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. **630 / 2024**</u>

ಸಿಡಬ್ಲ್ಯೂ- **3**
ಪಿಡಬ್ಲ್ಯೂ- **3**

<u>ದಿನಾಂಕಃ **05.06.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರುಃ - ಕಿರಣ
ತಂದೆಯ/ಗಂಡನ ಹೆಸರುಃ - ಶರಣಪ್ಪ
ವಯಸ್ಸುಃ -? **38** ವರ್ಷ
ಉದ್ಯೋಗಃ - ಖಾಸಗಿ ಕೆಲಸ.
ವಾಸಸ್ಥಳಃ - ಯಾದಗಿರಿ.

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಅಪಘಾತ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಬಿ)ಎಂದು ಗುರುತಿಸಲಾಯಿತು. ಕಳೆದ 1 ವರ್ಷಗಳ ಹಿಂದೆ ನಾನು ಯಾದಗಿರಿ - ಶಹಾಪೂರ ರಸ್ತೆಯ ಮೇಲೆ ನಾನು ಹೋಗುತ್ತಿದ್ದಾಗ ಪೊಲೀಸರು ನನ್ನ ನಿಲ್ಲಿಸಿ ಪೋಟೋವನ್ನು ತೆಗೆದಿರುತ್ತಾರೆ. ನಂತರ ನನ್ನ ಸಹಿಯನ್ನು ಪೊಲೀಸರು ನಿಪಿ 2ರ ಮೇಲೆ ಪಡೆದುಕೊಂಡಿದ್ದರು. ಸಾಕ್ಷಿಯು ತಾನು ಇರುವ ಪೋಟೋಗಳನ್ನು ತೋರಿಸಲಾಯಿತು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಸದರಿ ಪೋಟೋಗಳನ್ನು ಈಗಾಗಲೇ ನಿಪಿ 3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ನಿಪಿ 2ರ ಮೇಲೆ ಯಾವ ವಿಚಾರಕ್ಕಾಗಿ ನಾನು ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ, ಅದೇ ರೀತಿ ಪೋಟೋಗಳನ್ನು ಯಾವ ವಿಚಾರಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ ಇನ್ನೊಂದು ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಅಮಾನತುಪಡಿಸಿದ ಮಾಲುಗಳ ಜ್ಞಾಪನ ಪತ್ರ ಆಗಿರುತ್ತದೆ ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 5(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಇರುವ ಪೋಟೋಗಳನ್ನು ತೋರಿಸಲಾಯಿತು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಸದರಿ ಪೋಟೋಗಳನ್ನು ಈಗಾಗಲೇ

ನಿಪಿ 6 ರಿಂದ 9 ಎಂದು ಗುರುತಿಸಲಾಗಿರುತ್ತದೆ. ನಿಪಿ 5 ರ ಮೇಲೆ ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ 6 ರಿಂದ 9 ನ್ನು ಯಾವ ವಿಚಾರಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ದಿನಾಂಕಃ 01.01.2024 ರಂದು ಮದ್ಯಾಹ್ನ 1-30 ಗಂಟೆಯಿಂದ 2-30 ಗಂಟೆಯ ಅವಧಿಯಲ್ಲಿ ಪೊಲೀಸರು ಯಾದಗಿರಿ - ಶಹಾಪೂರ ಮುಖ್ಯ ರಸ್ತೆಯ ಭೀಮನದಿಯ ಹತ್ತಿರ ಇರುವ ಅಪಘಾತ ಸ್ಥಳದ ಪಂಚನಾಮೆಗೆ ನನ್ನನ್ನು ಕರೆದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-5 ರವರು ಹಾಜರಿದ್ದರು, ಅವರು ತೋರಿಸಿದ ಸ್ಥಳದಲ್ಲಿ ನನ್ನ ಸಮಕ್ಷಮ ಪೊಲೀಸರು ನಿಪಿ 2 ರಂತೆ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡುವಾಗ ನಿಪಿ 3 ಮತ್ತು 4 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

ನಂತರ ಅದೇ ದಿನ ಪೊಲೀಸರು ಮದ್ಯಾಹ್ನ 3 ಗಂಟೆಯಿಂದ 4 ಗಂಟೆಯ ವರೇಗೆ ಪೊಲೀಸರು ನನ್ನ ಸಮಕ್ಷಮ ನಿಪಿ 5 ರಂತೆ ವಾಹನ ಜಪ್ತಿ ಪಂಚನಾಮೆಯನ್ನು ಮಾಡಿ ಕೆಎಸ್ಆರ್‌ಟಿಸಿ ಬಸ್ಸು ನಂಃ ಕೆಎ-33-ಎಫ್-0418 ಹಾಗೂ ಮೋಟಾರು ಸೈಕಲ್ ನಂಃ ಕೆಎ-33-ವಿ-0510 ನೇದ್ದವುಗಳನ್ನು ಜಪ್ತಿಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ 6 ರಿಂದ 9 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ನಿಪಿ 2 ಮತ್ತು 5 ರಂತೆ ಪಂಚನಾಮೆ ಮಾಡಲು ನಾನು ಸಹಕರಿಸಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಬಿ.ಹೆಚ್. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.